ಬೆಂಗಳೂರುರವರನ್ನು 2015–16 ಸಾಲಿಗೆ ಲೆಕ್ಕಪರಿಶೋಧಕರನ್ನಾಗಿ ನೇಮಿಸಲಾಗಿತ್ತು. 31–3–2016ಕ್ಕೆ ಕೊನೆಗೊಂಡ ವರ್ಷದ ಲೆಕ್ಕಪರಿಶೋಧಕರ ವರದಿಯನ್ನು ಅನುಬಂಧ IVರಲ್ಲಿ ನೀಡಲಾಗಿದೆ.

**(ii) ಪೂರಕ ಲೆಕ್ಕ ಪರಿಶೋಧನೆ**

ಕರ್ನಾಟಕದ ಮಹಾಲೇಖಾಪಾಲರು ಕಂಪನಿ ಕಾಯಿದೆ 2013ರ ಸೆಕ್ಷನ್ 143(6)(ಬಿ)ರನ್ವಯ ಪೂರಕ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತಾರೆ. ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ವರದಿಯನ್ನು ಈ ವರದಿಯ ಭಾಗವಾದ ಅನುಬಂಧ Vರಲ್ಲಿ ನೀಡಲಾಗಿದೆ.

**(iii) ಸೆಕ್ರೆಟೇರಿಯಲ್ ಪರಿಶೋಧನೆ**

ಕಂಪನಿ ಕಾಯಿದೆ 2013ರ ಸೆಕ್ಷನ್ 204ರ ರೀತ್ಯ ನಿರ್ದೇಶಕ ಮಂಡಳಿಯು ಮೆ.ವಿಎನ್ & ಅಸೋಸಿಯೇಟ್ಸ್, ಕಂಪನಿ ಕಾರ್ಯದರ್ಶಿಗಳು, ಬೆಂಗಳೂರುರವರನ್ನು ಸೆಕ್ರೆಟೇರಿಯಲ್ ಪರಿಶೋಧಕರನ್ನಾಗಿ 2015–16 ಸಾಲಿಗೆ ನೇಮಕ ಮಾಡಿದೆ. ಅವರ ಸೆಕ್ರೆಟೇರಿಯಲ್ ಪರಿಶೋಧನಾ ವರದಿಯನ್ನು ಈ ವರದಿಯ ಭಾಗವಾಗುವ ಅನುಬಂಧ–VIರಲ್ಲಿ ನೀಡಲಾಗಿದೆ.

**(iv) ವೆಚ್ಚ ಲೆಕ್ಕಪರಿಶೋಧನೆ**

ನಿರ್ದೇಶಕರು ಕಂಪನಿ ಕಾಯಿದೆ 2013ರ ಸೆಕ್ಷನ್ 148ರ ಅನ್ವಯ ಶ್ರೀ ಬಿ.ಆರ್. ಸುಬ್ರಹ್ಮಣ್ಯ, ಎನ್.ಎಸ್. ಅಸೋಸಿಯೇಟ್ಸ್, ವೆಚ್ಚ ಲೆಕ್ಕ ಪರಿಶೋಧಕರವರನ್ನು ಕಂಪನಿಯ ವೆಚ್ಚ ಲೆಕ್ಕ ಪರಿಶೋಧಕರನ್ನಾಗಿ ನೇಮಿಸಿದ್ದಾರೆ. 31ನೇ ಮಾರ್ಚ್ 2016ಕ್ಕೆ ಕೊನೆಗೊಂಡ ವರ್ಷದ ವರದಿಯನ್ನು, ಭಾರತ ಸರ್ಕಾರದ ಕಾರ್ಪೋರೇಟ್ ವ್ಯವಹಾರಗಳ ಮಂತ್ರಾಲಯದಲ್ಲಿ ಕಂಪನಿಗಳ (ವೆಚ್ಚ ಲೆಕ್ಕ ಪತ್ರಗಳು ಮತ್ತು ಪರಿಶೋಧನೆ) ತಿದ್ದುಪಡಿ ನಿಯಮಗಳ 2014ರ ಅನ್ವಯ ಈ ವರದಿಯನ್ನು ಸಲ್ಲಿಸಲಾಗುವುದು.

**(v) ಆಂತರಿಕ ಲೆಕ್ಕಪರಿಶೋಧನೆ**

ಆಂತರಿಕ ಲೆಕ್ಕಪರಿಶೋಧಕರಾದ ಮೆ. ಸೊಂಡೆ ಶ್ರೀನಿವಾಸ್ ಅಂಡ್ ಕಂಪನಿ, ಛಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರುರವರು, ಕಂಪನಿ ಕಾಯಿದೆ 2013ರ ಸೆಕ್ಷನ್ 138ರ ರೀತ್ಯ ಆಂತರಿಕ ಲೆಕ್ಕ ಪರಿಶೋಧನೆಯನ್ನು ನಿಯತಕಾಲಗಳಲ್ಲಿ ನಡೆಸಿರುತ್ತಾರೆ ಮತ್ತು ನಿರ್ದೇಶಕ ಮಂಡಳಿಯ ಲೆಕ್ಕ ಪರಿಶೋಧನಾ ಸಮಿತಿಯು ಅವರ ವರದಿಯನ್ನು ಸಮಯಾನುಸಮಯಕ್ಕೆ ಪರಿಶೀಲಿಸಿರುತ್ತದೆ.

**ಆಂತರಿಕ ಆರ್ಥಿಕ ನಿಯಂತ್ರಣಗಳ ಪರ್ಯಾಪ್ತತೆ**

ಕಂಪನಿಯ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಬಗೆಗಿನ ಆಂತರಿಕ ಆರ್ಥಿಕ ನಿಯಂತ್ರಣಗಳು ಸಾಕಷ್ಟಿದ್ದು ಅವುಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆ.

**ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಪ್ರಸ್ತುತಪಡಿಸುವಿಕೆ**

31ನೇ ಮಾರ್ಚ್ 2016ಕ್ಕೆ ಕೊನೆಗೊಂಡ ವರ್ಷದ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳನ್ನು ಕಂಪನಿ ಕಾಯಿದೆ 2013ರ ಅನುಸೂಚಿ–III ರ ಅನ್ವಯ ತೋರಿಸಲಾಗಿದೆ. 2015–16ನೇ ಸಾಲಿನ ವರ್ಷದ ಹಣ ಹರಿವಿನ ಪಟ್ಟಿಯನ್ನು ಸ್ಥಿತಿ ವಿವರಣಾ ಪಟ್ಟಿಯ ಭಾಗವಾಗಿ ಲಗತ್ತಿಸಲಾಗಿದೆ.

**ಭಾರತೀಯ ಕಂಪನಿ ಕಾರ್ಯದರ್ಶಿಗಳ ಸಂಸ್ಥೆಯವರ ಸೆಕ್ರೆಟೇರಿಯಲ್ ಮಾನದಂಡಗಳು**

ಕೇಂದ್ರ ಸರ್ಕಾರದ ಕಾರ್ಪೊರೇಟ್ ಮಂತ್ರಾಲಯದಿಂದ ಅನುಮೋದಿಸಲ್ಪಟ್ಟ ನಿರ್ದೇಶಕ ಮಂಡಳಿಯ ಸಭೆ ಮತ್ತು ಸಾಮಾನ್ಯ ಸಭೆಗಳ ಬಗೆಗಿನ ಎರಡು ಸೆಕ್ರೆಟೇರಿಯಲ್ ಮಾನದಂಡಗಳನ್ನು ಭಾರತೀಯ ಕಂಪನಿ ಕಾರ್ಯದರ್ಶಿಗಳ ಸಂಸ್ಥೆಯು 1ನೇ ಜುಲೈ 2015ರಿಂದ ಅನ್ವಯವಾಗುವಂತೆ ಹೊರಡಿಸಲಾಗಿ ಕಂಪನಿಯು ಅವುಗಳನ್ನು ಪಾಲಿಸುತ್ತಿದೆ.

**ಅಪಾಯ ನಿರ್ವಹಣಾ ನೀತಿ**

ಗಣಿ ಕಾರ್ಯಾಚರಣೆಗಳು, ಅದರಲ್ಲೂ ವಿಶೇಷವಾಗಿ ಭೂಕೆಳಮೈ ಪ್ರದೇಶಗಳಲ್ಲಿನವು ಅತ್ಯಂತ ಅಪಾಯಕಾರಿ ಚಟುವಟಿಕೆಗಳೆಂದು ಪರಿಗಣಿತವಾಗಿವೆ. ಗಣಿ ಸುರಕ್ಷಾ ನಿರ್ದೇಶನಾಲಯವು ಹೊರಡಿಸಿರುವ ಮಾರ್ಗದರ್ಶಿಗಳಿಗನುಸಾರವಾಗಿ ಕಂಪನಿಯು ನೌಕರರ ಮತ್ತು ಸಲಕರಣೆಗಳ ಸುರಕ್ಷತೆಗಾಗಿ ಸೂಕ್ತ ನಿರ್ವಹಣಾ ನೀತಿಯನ್ನು ರೂಪಿಸಿದೆ. ಆಡಳಿತ ವರ್ಗ, ಕಾರ್ಮಿಕರ ಸಂಘ ಮತ್ತು ಗಣಿ ಸುರಕ್ಷಾ ನಿರ್ದೇಶಕರ ತ್ರಿಪಕ್ಷೀಯ ಸಭೆಯನ್ನು ಪ್ರತಿ ವರ್ಷವೂ ನಡೆಸಲಾಗುವುದು. ಈ ಸಭೆಯಲ್ಲಿ, ಇತರೇ ವಿಷಯಗಳೊಂದಿಗೆ, ಸುರಕ್ಷತಾ ಕ್ರಮಗಳು ಮತ್ತು ಪರಿಹಾರ ಕ್ರಮಗಳನ್ನು ಚರ್ಚಿಸಿ ನಂತರ ಕಾರ್ಯರೂಪಕ್ಕೆ ತರಲಾಗುವುದು. ಪ್ರಸ್ತುತವಿರುವ ಘಟನಾ ವಿಚಕ್ಷಣಾ ಪದ್ಧತಿಗಳೊಂದಿಗೆ ಉತ್ಪಾದನಾ ಪರಿಮಿತಿಗಳನ್ನು ಸಮಗ್ರೀಕರಣಗೊಳಿಸಲು ಉದ್ದೇಶಿಸಲಾಗಿದೆ. ಸುರಕ್ಷಿತ ಕಾರ್ಯಾಚರಣೆ ಮತ್ತು ಆರೋಗ್ಯಕರ ಕಾರ್ಯನಿರ್ವಹಣಾ ಸ್ಥಿತಿಗಳ ಬಗೆಗೆ ಸಾಕಷ್ಟು ತರಬೇತಿ ನೀಡುವುದೇ ಅಲ್ಲದೇ, ಕಾಲಕಾಲಕ್ಕೆ ನೌಕರರು ಮತ್ತು ಕಾರ್ಮಿಕ ಸಂಘದೊಂದಿಗೆ, ಸುರಕ್ಷೆ, ಆರೋಗ್ಯ ಮತ್ತು ಕ್ಷೇಮಕರ ರಸಾಯನಗಳ ಮತ್ತು ಸ್ಫೋಟಕಗಳ ಬಳಕೆಯ ಬಗೆಗೆಯೂ ಚರ್ಚಿಸಲಾಗುತ್ತದೆ.

**ಮಾನವ ಸಂಪನ್ಮೂಲ**

31ನೇ ಮಾರ್ಚ್ 2016ರಂದು ಒಟ್ಟು 4217 ನೌಕರರಿದ್ದು ಅದರ ವಿಂಗಡಣೆಯನ್ನು ಈ ಕೆಳಗೆ ಕೊಡಲಾಗಿದೆ.

| **ವಿವರಗಳು** | **ಒಟ್ಟು** | **ಪರಿಶಿಷ್ಟ ಜಾತಿ** | **ಶೇಕಡಾವಾರು** | **ಪರಿಶಿಷ್ಟ ಪಂಗಡ** | **ಶೇಕಡಾವಾರು** |
|---|---|---|---|---|---|
| ಅಧಿಕಾರಿಗಳು | 190 | 30 | 15.79 | 13 | 6.84 |
| ಕಛೇರಿ ನೌಕರರು | 217 | 57 | 26.27 | 11 | 5.07 |
| ಮೇಲುಸ್ತುವಾರಿ | 492 | 122 | 25.00 | 31 | 6.30 |
| ಇತರರು | 3318 | 845 | 25.47 | 489 | 15.00 |
| **ಒಟ್ಟು** | **4217** | **1054** | **25.00** | **544** | **13.00** |

**ಮಾಹಿತಿ ಹಕ್ಕು ಕಾಯಿದೆ**

ನಿಮ್ಮ ಕಂಪನಿಯು ಒಂದು ಸರ್ಕಾರಿ ಉದ್ಯಮವಾಗಿದ್ದು ಅದು ಮಾಹಿತಿ ಹಕ್ಕು ಕಾಯಿದೆ 2005ನ್ನು ಪರಿಪಾಲಿಸುವಲ್ಲಿ ಸೂಕ್ತಕ್ರಮಗಳನ್ನು ತೆಗೆದುಕೊಂಡಿರುತ್ತದೆ. ವರದಿಯ ವರ್ಷದಲ್ಲಿ 369 ಅರ್ಜಿಗಳನ್ನು ಸ್ವೀಕರಿಸಲಾಗಿದೆ. 357 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿ, 12 ಅರ್ಜಿಗಳು 31–3–2016ರಂದು ಬಾಕಿಯಿವೆ.

**ಕಾರ್ಯರೂಪದಲ್ಲಿ ಜಾರಿಗೊಳ್ಳುತ್ತಿರುವ ಯೋಜನೆಗಳು**

| ಕ್ರಮ ಸಂಖ್ಯೆ | ಯೋಜನೆಗಳು | ಅಂದಾಜು ವೆಚ್ಚ (ಕೋಟಿ ರೂ.ಗಳಲ್ಲಿ) |
|---|---|---|
| 1. | ಹಟ್ಟಿಯಲ್ಲಿ ಹೊಸ ಸರ್ಕ್ಯೂಲರ್ ಶಾಫ್ಟ್‌ನ ನಿರ್ಮಾಣ | 235.00 |
| 2. | ಬಾಹ್ಯ ಏಜೆನ್ಸಿಗಳ ಮೂಲಕ ಗಣಿ ನಿರ್ಮಾಣ ಮತ್ತು ದಕ್ಷಿಣ ಹಟ್ಟಿಯ ಮತ್ತು ಗಣಿಯಲ್ಲಿನ ಮುಖ್ಯ ರೀಫ್‌ನ ನಿರ್ಮಾಣ | 69.00 |
| 3. | ಹಟ್ಟಿಯಲ್ಲಿ ಭೂಕೆಳಮೈನಲ್ಲಿ ಹಿಂದಿರುಗುವ ವಾತಾಯನ ವ್ಯವಸ್ಥೆಯ ನಿರ್ಮಾಣ | 11.25 |
| 4. | ಹಟ್ಟಿಯಲ್ಲಿ ಪ್ರತಿ ಗಂಟೆಗೆ 50 ಟನ್ ಸಾಮರ್ಥ್ಯದ ಎರಡು ಬಾಲ್ ಮಿಲ್‌ಗಳು | 57.47 |
| 5. | ಊಟಿ ಗಣಿಯಲ್ಲಿ ಭೂ ಕಳಮೈ ಗಣಿ ನಿರ್ಮಾಣ | 33.00 |
| 6. | ಹಟ್ಟಿಯಲ್ಲಿ 14, MW ಸೂರ್ಯಶಕ್ತಿ ಸ್ಥಾವರ ನಿರ್ಮಾಣ | 96.60 |
| 7. | 3 ಟನ್ ಸಾಮರ್ಥ್ಯದ ಚಿನ್ನದ ಶುದ್ಧೀಕರಣ ಸ್ಥಾವರದ ನಿರ್ಮಾಣ | 1.50 |

**ಚಿತ್ರದುರ್ಗ ಚಿನ್ನದ ಘಟಕ**

ತುಮಕೂರು ಜಿಲ್ಲೆಯ ಅಜ್ಜನಹಳ್ಳಿಯಲ್ಲಿ ಗಣಿ ಕಾರ್ಯಾಚರಣೆಗಳಿಗಾಗಿ ಸರ್ಕಾರವು 38.04 ಹೆಕ್ಟೇರುಗಳ ಭೂಮಿಯನ್ನು ಕಂಪನಿಗೆ ಗುತ್ತಿಗೆ ನೀಡಿತ್ತು. 1995ರಲ್ಲಿ ಗಣಿ ಕಾರ್ಯಾಚರಣೆಗಳನ್ನು ಪ್ರಾರಂಭಿಸಿ, ಆರ್ಥಿಕವಾಗಿ ಲಾಭದಾಯಕವಾಗಿಲ್ಲದುದರಿಂದ ಮತ್ತು ಆಕ್ಸಿಡೈಸ್ ಆಗಿಲ್ಲದ ಚಿನ್ನದ ಅದುರಿನಿಂದಾಗಿ, 2002ನೇ ಇಸವಿಯಲ್ಲಿ ಅದನ್ನು ಸ್ಥಗಿತಗೊಳಿಸಲಾಗಿತ್ತು. ಆದರೆ, ಕಾರ್ಯಸಾಧ್ಯವಾದಲ್ಲಿ, ಅದನ್ನು ಈಗಿರುವ 264000 ಮೆಟ್ರಿಕ್ ಟನ್ನುಗಳ ಕೆಳದರ್ಜೆಯ ಅಜ್ಜನಹಳ್ಳಿಯಲ್ಲಿನ ಅದಿರನ್ನು ಸಂಸ್ಕರಿಸಿದ ನಂತರ ಪುನಶ್ಚೇತನಗೊಳಿಸಲು ಉದ್ದೇಶಿಸಲಾಗಿದೆ. ಹಾಗಾಗಿ ಕಂಪನಿಯು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಂದ ಬರಬೇಕಾದ ವಿವಿಧ ಅನುಮತಿಗಳನ್ನು ಪಡೆಯಲು ಪ್ರಯತ್ನಗಳನ್ನು ಮುಂದುವರೆಸುತ್ತಿದೆ.

# ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ

**ಗಣಿಗಾರಿಕೆಯ ಗುತ್ತಿಗೆಯ ನವೀಕರಣ**

ಎ. ಪಿಎಲ್ ಪ್ರದೇಶಗಳಲ್ಲಿನ ಆರ್‌ಪಿಗಳು:

2044 ಹೆಕ್ಟೇರ್ ಭೂ ಪ್ರದೇಶಗಳೆಡೆಗೆ ಸರ್ಕಾರದ ಅನುಮೋದನೆಗಾಗಿ ವಿವಿಧ ಹಂತಗಳಲ್ಲಿ 7 ಅರ್ಜಿಗಳು ಇವೆ.

ಬಿ. ಎಂಎಂ (ಡಿ & ಆರ್) ಕಾಯಿದೆ 2015ರಡಿಯಲ್ಲಿ ಪರಿಗಣಿತ ವಿಸ್ತರಣಾ ಪ್ರದೇಶಗಳು.

ಸರ್ಕಾರದ ವಿವಿಧ ಹಂತಗಳಲ್ಲಿ 782.88 ಹೆಕ್ಟೇರ್ ಭೂ ಪ್ರದೇಶಗಳೆಡೆಗೆ 7 ಅರ್ಜಿಗಳು ಇವೆ.

ಸಿ. ಎಂ.ಎಂ.(ಡಿ&ಆರ್) ಕಾಯಿದೆ 2015ರ ಸೆಕ್ಷನ್ 17ಎ(2ಎ)ರಡಿಯಲ್ಲಿ ಮೀಸಲಿಟ್ಟ ಪ್ರದೇಶಗಳು.

ಕಂಪನಿಯು 7859.80 ಹೆಕ್ಟೇರ್ ಭೂ ಪ್ರದೇಶದಲ್ಲಿ 17 ಸ್ಥಳಗಳನ್ನು ಗುರುತಿಸಲಾಗಿ, ಅದನ್ನು ಮೀಸಲಿಡುವ ಕಾರ್ಯಗಳ ಪ್ರಕ್ರಿಯೆಗಳು ಸರ್ಕಾರದ ವಿವಿಧ ಹಂತಗಳಲ್ಲಿವೆ

**ಜವಾಬ್ದಾರಿಗಳು**

ಕಂಪನಿಯ ದೈನಂದಿನ ಕಾರ್ಯಚಟುವಟಿಕೆಗಳು ಕಂಪನಿಯ ನಿರ್ದೇಶಕರ ಮಂಡಳಿಯ ವಶದಲ್ಲಿದೆ. ವ್ಯವಸ್ಥಾಪಕ ನಿರ್ದೇಶಕರು ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದು, ಅವರು ಹಿರಿಯ ಅಧಿಕಾರಿಗಳಿಂದ ನೆರವು ಪಡೆಯುತ್ತಾರೆ. ಎಲ್ಲಾ ಪ್ರಮುಖ ನಿರ್ಧಾರಗಳನ್ನು ನಿರ್ದೇಶಕರ ಮಂಡಳಿಯ ಅನುಮೋದನೆಯೊಂದಿಗೆ ತೆಗೆದುಕೊಳ್ಳಲಾಗುತ್ತದೆ. ನಿಮ್ಮ ನಿರ್ದೇಶಕರ ಮಂಡಳಿಯು ಕರ್ನಾಟಕ ಸರ್ಕಾರದ ಮತ್ತು ಷೇರುದಾರರ ಆದೇಶಗಳನ್ನು ಸಮಯಾನುಸಮಯಕ್ಕೆ ಪಾಲಿಸಬೇಕಿದೆ. ನಿಮ್ಮ ನಿರ್ದೇಶಕರ ಮಂಡಳಿಯು, ಕರ್ನಾಟಕ ಸರ್ಕಾರ ಮತ್ತು ಷೇರುದಾರರ ಹಿತಾಸಕ್ತಿಗಳನ್ನು, ಅವರ ದೀರ್ಘಕಾಲೀನ ಮೌಲ್ಯಗಳಾದ ನೀತಿಗಳು, ಯೋಜನೆಗಳು, ತಂತ್ರಕೌಶಲ್ಯಗಳು, ಮಾರ್ಗದರ್ಶನಗಳು ಮತ್ತು ಸಾಮಾಜಿಕ ಯೋಜನೆಗಳ ಅನುಷ್ಠಾನವನ್ನೂ ಒಳಗೊಂಡಂತೆ, ಅವನ್ನು ಪ್ರತಿನಿಧಿಸುತ್ತದೆ. ಆಡಳಿತ ಮಂಡಳಿಯು, ನಿರ್ವಹಣೆ, ಆಡಳಿತ, ಹಣಕಾಸು, ತಾಂತ್ರಿಕ ನೈಪುಣ್ಯತೆ ಒಳಗೊಂಡಂತೆ ಇರುವ ತಜ್ಞರ ಮಿಶ್ರಣವಾಗಿರುತ್ತದೆ.

**ಭವಿಷ್ಯದ ದೃಷ್ಟಿಕೋನಗಳು**

ಚೀನಾ ದೇಶದ ಹೊರತಾಗಿ ಭಾರತವು ಅತಿ ಹೆಚ್ಚು ಚಿನ್ನದ ಬಳಕೆದಾರ ದೇಶವಾಗಿದೆ. ಭಾರತದ ಬೇಡಿಕೆಯ ಕೇವಲ 1/2% ರಷ್ಟು ಚಿನ್ನವನ್ನು ಮಾತ್ರ ಹಟ್ಟಿ ಚಿನ್ನದ ಗಣಿ ಕಂಪನಿಯು ಪೂರೈಸುತ್ತದೆ. ಭಾರತದಲ್ಲಿ ಚಿನ್ನದ ಕ್ಷೇತ್ರವನ್ನು ತೆರೆದಿಡಲು ವಿಶಾಲ ಅವಕಾಶವಿದೆ. ಕಂಪನಿಯು ತನ್ನದೇ ಪ್ರತ್ಯೇಕ ಗಣಿ ಕಾರ್ಯಾಚರಣೆಗಳ ಸೌಲಭ್ಯದ ಜೊತೆಗೆ 16109 ಹೆಕ್ಟೇರ್ ಭೂ ಭಾಗದಲ್ಲಿನ 14 ಕ್ಷೇತ್ರಗಳನ್ನು ಹಟ್ಟಿ–ಮಸ್ಕಿ ಪ್ರದೇಶದಲ್ಲಿ ಸಂಭಾವ್ಯ 30 ಟನ್ ಅದಿರು ಇರುವ ಪ್ರದೇಶವನ್ನು ಗುರುತಿಸಿದೆ ಈ ಬಗೆಗಿನ ಪ್ರಸ್ತಾಪವು ಸರ್ಕಾರದ ವಿವಿಧ ಹಂತದಲ್ಲಿ ಪರಿಶೀಲನೆಯಲ್ಲಿದೆ.

ಆದರೆ ಭಾರತದಲ್ಲಿ ಚಿನ್ನದ ಬೆಲೆಯು ಪ್ರಸ್ತುತ ಅಂತರರಾಷ್ಟ್ರೀಯ ಬೆಲೆಯ ಮೇಲೆ ಅವಲಂಬಿತವಾಗಿದ್ದು, ಅದು ಜಾಗತಿಕ ಆರ್ಥಿಕ ಅಂಶಗಳ ಆಧಾರದ ಮೇಲೆ ಬದಲಾವಣೆಗೊಳ್ಳುತ್ತದೆ. ಚಿನ್ನದ ಮೇಲಿನ ಒಟ್ಟು ಬೇಡಿಕೆ ಮತ್ತು ಸರಬರಾಜಿಗೆ ಹೋಲಿಸಿದಾಗ ಹಟ್ಟಿಯಲ್ಲಿನ ಚಿನ್ನದ ಉತ್ಪಾದನೆಯು ಬಹಳ ಕಡಿಮೆ ಇರುವುದರಿಂದ, ಬಾಹ್ಯ ಅಂಶಗಳು, ಕಂಪನಿಯ ಕಾರ್ಯಾಚರಣೆಯ ಮೇಲೆ ಚಿನ್ನದ ಬೆಲೆಯಲ್ಲಿ ಸಾಕಷ್ಟು ಇಳಿಕೆಯಾದಲ್ಲಿ ಮಾತ್ರ, ಪ್ರಸ್ತುತ ಬೆಲೆಯ ಮೇಲೆ ಪರಿಣಾಮ ಬೀರುವುದು. ಚಿನ್ನದ ಬೆಲೆಯ ಬದಲಾವಣೆಗಳನ್ನು ನಿಮ್ಮ ಕಂಪನಿಯು ನಿರಂತರವಾಗಿ ಗಮನಿಸುತ್ತಿದ್ದು, ಪ್ರತಿಕೂಲ ಬದಲಾವಣೆಗಳ ಪರಿಸ್ಥಿತಿಯಲ್ಲಿ ತನ್ನ ಕಾರ್ಯಾಚರಣೆಗಳನ್ನು ಮುಂದುವರೆಸಲು ಮತ್ತು ವೆಚ್ಚಗಳನ್ನು

ತಗ್ಗಿಸಲು ಬೇಕಾದ ಸಮರ್ಪಕ/ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತದೆ. ಜಾಗತಿಕ ಸ್ವರ್ಣ ಸಮಿತಿಯ ವಿವಿಧ ವರದಿಗಳ ಪ್ರಕಾರ ಚಿನ್ನದ ಬೆಲೆಯು ಈಗಾಗಲೆ ಕೆಳಹಂತ ತಲುಪಿದ್ದು. ಇನ್ನು ಮುಂದೆ ಅದು ಮೇಲೇರಲು ಪ್ರಾರಂಭಿಸಿದೆ. ಭಾರತ ಸರ್ಕಾರವು ಚಿನ್ನದ ನಾಣ್ಯೀಕರಣ ಯೋಜನೆಯ ಮೂಲಕ ಚಿನ್ನದ ಬಾಂಡುಗಳನ್ನು ನೀಡಿ ಚಿನ್ನದ ಆಮದನ್ನು ಕಡಿಮೆ ಮಾಡಲೋಸುಗ ಮತ್ತು ಅದರಿಂದ ಸರ್ಕಾರದ ಚಾಲ್ತಿ ಲೆಕ್ಕದ ಕೊರತೆಯನ್ನು ನಿವಾರಿಸುವ ಕ್ರಮಗಳನ್ನು ಪ್ರಸ್ತಾಪಿಸಿದೆ. ಚಿನ್ನದ ನಾಣ್ಯೀಕರಣ ಯೋಜನೆಯಡಿಯಲ್ಲಿ, ಚಿನ್ನದ ದಾಸ್ತಾನನ್ನು ಭಾಗಶಃ ಠೇವಣಿ ಇಡುವ ಕ್ರಮಗಳೂ ಸರ್ಕಾರದ ಸಕ್ರಿಯ ಪರಿಶೀಲನೆಯಲ್ಲಿದೆ.

## ಕೃತಜ್ಞತೆಗಳು

ನಿಮ್ಮ ನಿರ್ದೇಶಕರು ಕೇಂದ್ರ ಸರ್ಕಾರ, (ಗಣಿ ಇಲಾಖೆ, ಪರಿಸರ ಇಲಾಖೆ ಮತ್ತು ಕಾರ್ಮಿಕ ಇಲಾಖೆಗಳೂ ಸೇರಿದಂತೆ), ಕರ್ನಾಟಕ ಸರ್ಕಾರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಗಣಿ ಸುರಕ್ಷಾ ಮಹಾ ನಿರ್ದೇಶಕರು, ಭಾರತ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್, ಶಾಸನಬದ್ಧ ಲೆಕ್ಕಪರಿಶೋಧಕರು, ಆಂತರಿಕ ಲೆಕ್ಕಪರಿಶೋಧಕರು, ಕಾನೂನು ಸಲಹೆಗಾರರು, ಸಮಾಲೋಚಕರು, ಬ್ಯಾಂಕುಗಳು, ವಿಮಾ ಕಂಪನಿಗಳು, ಷೇರುದಾರರು, ಗ್ರಾಹಕರು, ಸರಬರಾಜುದಾರರು ಮತ್ತು ಇತರರಿಗೆ ಅವರು ನೀಡಿದ ನಿರಂತರ ಸಾಮಯಿಕ ಪರಾಮರ್ಶೆ, ಮಾರ್ಗದರ್ಶನ, ಸಹಕಾರ ಮತ್ತು ಬೆಂಬಲಕ್ಕಾಗಿ ಅವರನ್ನು ವಂದಿಸುತ್ತಾರೆ. ಕಂಪನಿಯ ಎಲ್ಲಾ ನೌಕರರು ಮತ್ತು ಅಧಿಕಾರಿಗಳು ನೀಡಿದ ಸಹಕಾರಕ್ಕಾಗಿ ಅವರನ್ನೂ ವಂದಿಸುತ್ತಾರೆ.

**ಆಡಳಿತ ಮಂಡಳಿಯ ಪರವಾಗಿ**

**ಸಹಿ/–**

**ಬೆಂಗಳೂರು,**
**ತಾ : 05–08–2016**

**(ರಾಣಿ ಸತೀಶ್)**
**ಅಧ್ಯಕ್ಷರು**

**ನಿರ್ದೇಶಕರ ವರದಿಗೆ ಅನುಬಂಧ–I**

**2015–16ನೇ ಆರ್ಥಿಕ ವರ್ಷಕ್ಕೆ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯ(ಸಿಎಸ್‌ಆರ್) ಬಗೆಗಿನ ವಾರ್ಷಿಕ ವರದಿ**

| | |
|---|---|
| 1. ಕಂಪನಿಯ ಸಾಮಾಜಿಕ ಜವಾಬ್ದಾರಿ ನೀತಿಗಳ ಬಗೆಗೆ ಒಂದು ಕಿರು ರೂಪುರೇಶೆ ಮತ್ತು ಕೈಗೊಳ್ಳಲಾಗುವ ಉದ್ದೇಶಿತ ಯೋಜನೆಗಳು ಮತ್ತು ಕಾರ್ಯಕ್ರಮಗಳು ವೆಬ್‌ಸೈಟ್‌ಗೆ ಸಂಬಂಧಿಸಿದಂತೆ ಮತ್ತು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯ ವಿವರಗಳು | ಸಾಮಾಜಿಕ ಜವಾಬ್ದಾರಿ ನೀತಿಗಳು ಕಂಪನಿಯ ವೆಬ್‌ಸೈಟ್‌ನಲ್ಲಿ ದೊರೆಯುತ್ತವೆ. |
| 2. ಕಳೆದ 3 ವರ್ಷಗಳ ಸರಾಸರಿ ನಿವ್ವಳ ಲಾಭ | 16180.45 ಲಕ್ಷ ರೂ.ಗಳು |
| 3. ನಿಗದಿತ ಸಿಎಸ್‌ಆರ್ ಖರ್ಚು (ಮೇಲ್ಕಂಡ ಕ್ರಮಸಂಖ್ಯೆಯ 2ರ ಶೇ.2 ರಷ್ಟು) | 323.61 ಲಕ್ಷ ರೂ.ಗಳು |
| 4. ಪ್ರಸ್ತುತ ವರ್ಷದಲ್ಲಿ ಸಿಎಸ್‌ಆರ್‌ಯೆಡೆಗೆ ಮಾಡಲಾದ ಒಟ್ಟು ಖರ್ಚು | |
| ಒಟ್ಟು ಖರ್ಚು | 323.70 ಲಕ್ಷ ರೂ.ಗಳು |
| ಖರ್ಚು ಮಾಡದಿರುವ ಮೊಬಲಗು | ಅನ್ವಯವಾಗದು |
| ಖರ್ಚು ಮಾಡಿದ ರೀತಿಯ ಬಗೆಗಿನ ವಿವರಗಳು | ವಿವರಗಳನ್ನು ಕೆಳಗೆ ಕೊಡಲಾಗಿದೆ |

**ಆರ್ಥಿಕ ವರ್ಷ 2015–16ರಲ್ಲಿ ಸಾಮಾಜಿಕ ಜವಾಬ್ದಾರಿಯಡಿಗೆ ಮಾಡಲಾದ ವೆಚ್ಚಗಳ ವಿವರಗಳು**

( ಲಕ್ಷ ರೂ.ಗಳು)

| ಕ್ರಮ ಸಂಖ್ಯೆ | ಯೋಜನೆಗಳನ್ನೊಂಡ ಕ್ಷೇತ್ರಗಳು | ಯೋಜನೆಗಳ ಸಂಖ್ಯೆ | ಒಳಗೊಂಡ ಕಾರ್ಯ ಚಟುವಟಿಕೆಗಳು | ಸ್ಥಳಗಳು | ವೆಚ್ಚ ಮಾಡಲಾಗುವ ಮೊಬಲಗು (ಅಂದಾಜು) | ಮಂಜೂರಾದ ಮತ್ತು ವೆಚ್ಚ ಮಾಡಲಾದ ಮೊಬಲಗು | ಒಟ್ಟುಗೂಡಿದ ವೆಚ್ಚ | ಅನುಷ್ಠಾನ ಗೊಳಿಸುವ ಸಂಸ್ಥೆ |
|---|---|---|---|---|---|---|---|---|
| 1. | ವಿದ್ಯಾಭ್ಯಾಸ, ಉದ್ಯೋಗ ಮತ್ತು ತರಬೇತಿ | 13 | ಪೀಠೋಪಕರಣಗಳು, ಶಾಲಾ ಕಟ್ಟಡಗಳು ಮತ್ತು ಇತರೆ ಮೂಲ ಸೌಲಭ್ಯಗಳು | ಹೈದರಾಬಾದ್ ಕರ್ನಾಟಕ, ಬೆಂಗಳುರು ಮತ್ತು ಇತರೆ ಪ್ರದೇಶ | 879.51 | 143.70 | 143.70 | ನೇರವಾಗಿ |
| 2. | ಆರೋಗ್ಯ ರಕ್ಷಣೆ ಮತ್ತು ಪುನರ್ವಸತಿ | 3 | ವೈದ್ಯಕೀಯ ಉಪಕರಣಗಳು, ಪುನರ್ವಸತಿ ಕೇಂದ್ರಗಳು ಮತ್ತು ಆರೋಗ್ಯ ಶಿಬಿರಗಳು | ಬೆಂಗಳೂರು ಪ್ರದೇಶ | 235.20 | 117.70 | 117.70 | ನೇರವಾಗಿ |
| 3. | ಪರಿಸರ | 1 | ಚಿಕ್ಕ ಮೃಗಾಲಯಕ್ಕೆ ಆಟದ ಸಾಮಾನುಗಳು | ಚಿತ್ರದುರ್ಗ ಪ್ರದೇಶ | 10.37 | 5.00 | 5.00 | ನೇರವಾಗಿ |
| 4. | ಗ್ರಾಮೀಣ ಅಭಿವೃದ್ಧಿ, ಪುರಸಭಾ ತ್ಯಾಜ್ಯ ನಿರ್ವಹಣೆ | 3 | ಮೂಲಭೂತ ಸೌಕರ್ಯ, ಕುಡಿಯುವ ನೀರಿನ ಸೌಕರ್ಯಗಳು | ಹೈದರಾಬಾದ್ ಕರ್ನಾಟಕ ಮತ್ತು ಬೆಂಗಳೂರು ಪ್ರದೇಶ | 60.40 | 40.00 | 40.00 | ನೇರವಾಗಿ |
| 5. | ಮಹಿಳೆ ಮತ್ತು ಹಿರಿಯ ನಾಗರೀಕರ ಸಬಲೀಕರಣ | 4 | ಮೂಲಭೂತ ಸೌಕರ್ಯಗಳನ್ನು ಒದಗಿಸುವುದು | ಬೆಂಗಳೂರು ಪ್ರದೇಶ | 37.09 | 13.80 | 13.80 | ನೇರವಾಗಿ |
| 6 | ಕ್ರೀಡೆಗಳು | 1 | ಕ್ರೀಡಾ ತರಬೇತಿ ಉಪಕರಣಗಳು | ಬೆಂಗಳೂರು ಪ್ರದೇಶ | 5.00 | 3.50 | 3.50 | ನೇರವಾಗಿ |
| | | | | **ಒಟ್ಟು** | **1227.57** | **323.70** | **323.70** | |

## ನಿರ್ದೇಶಕರ ವರದಿಗೆ ಅನುಬಂಧ–II

ಕಂಪನಿ (ಲೆಕ್ಕ ಪತ್ರಗಳು) ನಿಯಮ 2014ರ ರೀತ್ಯ ಶಕ್ತಿ ಸಂರಕ್ಷಣೆ, ತಂತ್ರಜ್ಞಾನ ಅಳವಡಿಕೆ ಮತ್ತು ವಿದೇಶಿ ವಿನಿಮಯದ ಗಳಿಕೆ ಮತ್ತು ವೆಚ್ಚದ ವಿವರಗಳು.

**ಎ. ಶಕ್ತಿ ಸಂರಕ್ಷಣೆ**

**1. ಶಕ್ತಿ ಸಂರಕ್ಷಣೆಗಾಗಿ ಕೈಗೊಂಡ ಕ್ರಮಗಳು**

ಅ. ಶಕ್ತಿಸಕ್ರಿಯ ಮೋಟರುಗಳನ್ನು ಅಳವಡಿಸುವ ಪ್ರಕ್ರಿಯೆಗಳು ವರ್ಷದಲ್ಲಿ ಮುಂದುವರೆದವು.

ಆ. ಸಾಂಪ್ರದಾಯಿಕ ದೀಪಗಳ ಬದಲಿಗೆ ಎಲ್‌ಇಡಿ ದೀಪಗಳನ್ನು ಹಂತಹಂತವಾಗಿ ಅಳವಡಿಸಿರುವುದು.

ಇ. ಜೈವಿಕ ಇಂಧನ ಸ್ಥಾವರವು 90 ಟನ್ ಬೀಜಗಳನ್ನು ಸಂಸ್ಕರಿಸಿ 16500 ಲೀಟರ್ ಜೈವಿಕ ಇಂಧನವನ್ನು ಉತ್ಪಾದಿಸಿತು.

**2. ಬದಲಿ ಶಕ್ತಿಯ ಮೂಲವನ್ನು ಬಳಸಿಕೊಳ್ಳುವುದು**

ಅ. ವಾಯು ವಿದ್ಯುತ್ ಯಂತ್ರಗಳಿಂದ ಉತ್ಪಾದಿಸಲಾದ ವಾಯುವಿದ್ಯುತ್ತನ್ನು ಸ್ವಂತ ಬಳಕೆಗಾಗಿ ಉಪಯೋಗಿಸಿಕೊಳ್ಳುವ ಪ್ರಸ್ತಾಪವು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಮುಂದಿದೆ.

ಆ. 14 ಮೆ.ವ್ಯಾ. ಸಾಮರ್ಥ್ಯದ ಸೌರಶಕ್ತಿಯ ಪಿವಿ ಸ್ಥಾವರವನ್ನು ಹಟ್ಟಿಯಲ್ಲಿ ಸ್ಥಾಪಿಸಲು ಸಲುವಾಗಿನ ಟೆಂಡರ್ ಪ್ರಕ್ರಿಯೆಗಳು ಅಂತಿಮ ಹಂತದಲ್ಲಿವೆ.

ಇ. ಬಯೋ–ಗ್ಯಾಸ್‌ನ್ನು ಬಳಸಿಕೊಳ್ಳುವುದನ್ನು ಮುಂದುವರೆಸುತ್ತಾ ಎಲ್‌ಪಿಜಿ ಅನಿಲದ ಮೇಲಿನ ಅವಲಂಬನೆಯನ್ನು ಕಡಿಮೆಗೊಳಿಸುತ್ತಿರುವುದು.

ಈ. ಕಂಪನಿಯು ತನ್ನ ವಾಹನಗಳಿಗೆ 2500 ಲೀಟರ್‌ನಷ್ಟು ಜೈವಿಕ ಇಂಧನವನ್ನು ಬಳಸಿಕೊಂಡಿತು.

**3. ಶಕ್ತಿ ಸಂರಕ್ಷಣೆಯೆಡೆಗೆ ಬಂಡವಾಳ ಖರ್ಚುಗಳು**

| ಕ್ರಮ ಸಂಖ್ಯೆ | ವಿವರಗಳು | ಮೊಬಲಗು |
|---|---|---|
| 1 | ನಿಯತಗೊಳಿಸಲಾದ ಜೈವಿಕ ಡೀಸೆಲ್ ಸ್ಥಾವರ | ₹ 21.96 ಲಕ್ಷಗಳು |
| 2 | ಹಟ್ಟಿಯಲ್ಲಿ 14 ಮೆ.ವಾ. ಸಾಮರ್ಥ್ಯದ ಸೌರಶಕ್ತಿಯ ಪಿವಿ ಯೋಜನೆಗಳ ಪ್ರಸ್ತಾವನೆ | ಅಂದಾಜು ವೆಚ್ಚ ₹ 9660 ಲಕ್ಷಗಳು |
| 3 | ಹಳೆ ದೀಪಗಳನ್ನು ಬದಲಿಸಿ ಎಲ್‌ಇಡಿ ಫ್ಲೋರೋಸೆಂಟ್ ದೀಪಗಳನ್ನು ಹಾಕುವುದು | ₹ 20.00 ಲಕ್ಷಗಳು |
| 4 | ಇಂಧನ ಪರಿಶೋಧನೆ ಕಾರ್ಯಗಳನ್ನು ಕೈಗೊಳ್ಳುವುದು | ಅಂದಾಜು ವೆಚ್ಚ ₹ 17.25 ಲಕ್ಷಗಳು |
| 5 | ಊಟಿ ಮತ್ತು ಹೀರಾಬುದ್ದಿನಿ ಪ್ರದೇಶದಲ್ಲಿ ವಾಯು ವಿದ್ಯುತ್ ಉತ್ಪಾದಿಸಲು ಸಂಭಾವ್ಯ ಅಧ್ಯಯನ ಮಾಡಲು ಮತ್ತು ಚಿತ್ರದುರ್ಗದಲ್ಲಿ ಪುನರ್ಬಲೀಕರಣ ಕೈಗೊಳ್ಳಲು ಸಮಾಯೋಜಕರಗಳ ನೇಮಕಾತಿ | ಅಂದಾಜು ವೆಚ್ಚ ₹ 35.70 ಲಕ್ಷ ರೂ.ಗಳು |

**ಬಿ. ತಂತ್ರಜ್ಞಾನದ ಅಳವಡಿಕೆ**

ಕಂಪನಿಯ ಅಂದಾಜು 23,500 ಲಕ್ಷ ರೂ.ಗಳ ವೆಚ್ಚದಲ್ಲಿ ಹೊಸ ಸರ್ಕ್ಯೂಲರ್ ಶಾಫ್ಟ್‌ನ್ನು ನಿಯತಗೊಳಿಸುತ್ತಿದೆ. ಸ್ವಯಂಗೂಡಿತ ತಾಂತ್ರಿಕತೆಯನ್ನೊಳಗೊಂಡ 9273 ಲಕ್ಷ ರೂ.ಗಳ ವೆಚ್ಚದ ಕೆಲವು ಆಮದು ಮಾಡಿಕೊಂಡ ಯಂತ್ರೋಪಕರಣಗಳೂ ಈ ಯೋಜನೆಯಲ್ಲಿ ಸೇರಿಕೊಂಡು ಅವುಗಳನ್ನು ನಿಯತಗೊಳಿಸಲಾಗುತ್ತದೆ.

**ಸಿ. ವಿದೇಶಿ ವಿನಿಮಯದ ಗಳಿಕೆ ಮತ್ತು ವೆಚ್ಚ**

ಅ. ಗಳಿಕೆ – ಇಲ್ಲ

ಆ ವೆಚ್ಚ – ಇಲ್ಲ

**ನಿರ್ದೇಶಕರ ವರದಿಗೆ ಅನುಬಂಧ III**

**ನಮೂನೆ ಸಂಖ್ಯೆ ಎಂಜಿಟಿ-9**

## 31ನೇ ಮಾರ್ಚ್ 2016ನೇ ವರ್ಷಕ್ಕೆ ಕೊನೆಗೊಂಡ ವಾರ್ಷಿಕ ವರದಿಯ ಉದ್ಧೃತಭಾಗ

**[ಕಂಪನಿ ಕಾಯಿದೆ 2013ರ ಸೆಕ್ಷನ್ 92(3)ರಡಿಯಲ್ಲಿ ಮತ್ತು ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಗಳು 2014ರ ಅನ್ವಯ]**

**I.** ನೋಂದಾವಣೆ ಮತ್ತು ಇತರ ವಿವರಗಳು:

| | | |
|---|---|---|
| i) | ಕಂಪನಿ ಗುರುತಿನ ಸಂಖ್ಯೆ CIN: | **U85110KA1947SGC001321** |
| | ವಿದೇಶಿ ಕಂಪನಿಯ ನೋಂದಣಿ ಸಂಖ್ಯೆ: | **ಅನ್ವಯವಾಗುವುದಿಲ್ಲ** |
| ii) | ನೋಂದಣಿಯ ದಿನಾಂಕ | **8ನೇ ಜುಲೈ 1947** |
| iii) | ಕಂಪನಿಯ ಹೆಸರು: | **ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ** |
| iv) | ಕಂಪನಿಯ ವರ್ಗ (ಗುರುತು ಮಾಡಿರಿ) **:** | |
| | 1. ಸಾರ್ವಜನಿಕ ಕಂಪನಿ | (✓) |
| | 2. ಖಾಸಗಿ ಕಂಪನಿ | ( ) |

ಕಂಪನಿಯ ಉಪವರ್ಗ (ಅನ್ವಯವಾಗುವುದನ್ನು ಗುರುತು ಮಾಡಿರಿ) **:**

| | | |
|---|---|---|
| 1. | ಸರ್ಕಾರ ಕಂಪನಿ | (✓) |
| 2. | ಸಣ್ಣ ಕಂಪನಿ | ( ) |
| 3. | ಏಕವ್ಯಕ್ತಿ ಕಂಪನಿ | ( ) |
| 4. | ವಿದೇಶಿ ಕಂಪನಿಯ ಅಧೀನ ಕಂಪನಿ | ( ) |
| 5. | ಎನ್‌ಬಿಎಫ್‌ಸಿ | ( ) |
| 6. | ಗ್ಯಾರಂಟಿ ಕಂಪನಿ | ( ) |
| 7. | ಷೇರುಗಳಿಂದ ನಿಯಮಿತ ಕಂಪನಿ | ( ) |
| 8. | ಅನಿಯಮಿತ ಕಂಪನಿ | ( ) |
| 9. | ಷೇರು ಬಂಡವಾಳವನ್ನು ಹೊಂದಿರುವ ಕಂಪನಿ | ( ) |
| 10. | ಷೇರು ಬಂಡವಾಳವನನು ಹೊಂದಿಲ್ಲದ ಕಂಪನಿ | ( ) |
| 11. | ಸೆಕ್ಷನ್ 8ರಡಿಯಲ್ಲಿ ನೋದಣಿಯಾದ ಕಂಪನಿ | ( ) |